ಪೋಲೀಸ್ ಗೋಲಿಬಾರ್‌ನಲ್ಲಿ ಸೊಂದವರಿಗೆ ಪರಿಹಾರ ಧನ

೧೫೦(೪೩೨) ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ). —ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಡಿಸೆಂಬರ್ ೧೯೮೮ರಲ್ಲಿ ಬೆಂಗಳೂರು, ಮೈಸೂರು ಮತ್ತು ತುಮಕೂರಿನಲ್ಲಿ ನಡೆದ ಪೋಲೀಸು ಗೋಲೀಬಾರಿನಲ್ಲಿ ಸತ್ತವರಿಗೆ ಪರಿಹಾರವನ್ನು ಸರಕಾರವು ಮಂಜೂರು ಮಾಡಿದೆಯೇ ?

ಆ) ಹಾಗಿದ್ದರೆ ಮರಣಹೊಂದಿದವರ ಹಾಗೂ ಗಾಯಗೊಂಡವರ ಸಂಬಂಧಿಕರಿಗೆ ಪಾವತಿ ಮಾಡಿದ ಪರಿಹಾರದ ಪೊಬಲಗೆಷ್ಟು ಪಾವತಿ ಮಾಡಿಲ್ಲದಿದ್ದರೆ ಕಾರಣಗಳೇನು ?

ಇ) ಪೋಲೀಸ್ ಗೋಲೀಬಾರ್ ನಡೆದ ಎಲ್ಲಾ ಸ್ಥಳಗಳಲ್ಲಿ ಮರಣಹೊಂದಿದವರಿಗೆ ಪರಿಹಾರವನ್ನು ನೀಡಲಾಗಿದೆಯೇ ಅಥವಾ ಕೆಲವು ನಿಗದಿತ ಸ್ಥಳಗಳಲ್ಲಿ ಮಾತ್ರವೇ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಹೌದು

ಆ)

		ಮರಣ ಹೊಂದಿದವರಿಗೆ	ಗಾಯ ಗೊಂಡವರಿಗೆ
೧.	ಬೆಂಗಳೂರು	೨,೨೦,೦೦೦	೨೭,೫೦೦
೨.	ಮೈಸೂರು	೮೦,೦೦೦	೨೫,೦೦೦
೩.	ತುಮಕೂರು	೨೦,೦೦೦	೫,೦೦೦

ಇ) ಹೌದು. ಪೋಲೀಸು ಗೋಲೀಭಾರ್ ನಡೆದ ಎಲ್ಲಾ ಸ್ಥಳಗಳಲ್ಲಿಯೂ ಹಾನಿಗೊಳಗಾದವರಿಗೆ ಪರಿಹಾರವನ್ನು ಕೊಡಲಾಗಿದೆ.

ಶ್ರೀಮತಿ ಮುಕ್ತರುನ್ನಿಸ.—ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೇ, ಇನ್‌ಜ್ಯೂರ್ಡ್ ಪರ್ಸನ್‌ಗಳಿಗೆ ಈವರೆಗೆ ಹಣ ಸಿಕ್ಕಿಲ್ಲ ಮತ್ತು ಅಂಗಡಿಯಾಗಿರತಕ್ಕಂತಹವರಿಗೂ ಕೂಡ ಹಣ ಸಿಕ್ಕಿಲ್ಲ ಅವರು ದಾರಿಯಲ್ಲಿ ಬಿದ್ದಿದ್ದಾರೆ. ಅವರಿಗೆ ಜಾಸ್ತಿ ಹಣವನ್ನು ಒದಗಿಸಿ ಕೊಡಬೇಕು ಮತ್ತು ಈವರೆಗೆ ಯಾರುಯಾರಿಗೆ ಹಣ ಸಿಕ್ಕಿಲ್ಲ ಅವರಿಗೆ ಹಣವನ್ನು ಆದಷ್ಟು ಬೇಗನೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಅಧಿಕಾರಿಗಳು ಮಹಜರ್ ಮಾಡಿರತಕ್ಕಂತಹ ಪಟ್ಟಿಯಲ್ಲಿ ಯಾರಿಗಾದರೂ ಪರಿಹಾರ ಕೊಡದೇ ಇದ್ದರೆ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿದು ಹೋಗಿದೆ ಉಳಿದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬಹುದಿತ್ತು ಆದರೆ ನಿಮ್ಮೆಲ್ಲರ ಹಿತದೃಷ್ಟಿಯಿಂದ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡುತ್ತೇನೆ ಎಲ್ಲರೂ ಒಂದೊಂದು ಕ್ಲಾರಿಫಿಕೇಷನ್ ಅನ್ನು ಮಾತ್ರ ಕೇಳಬೇಕು.

ಬೀಳಗಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು

೧೫೧(೫೮) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ). —ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೆಳಗಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಕಟ್ಟಿಸಲು ಸರ್ಕಾರ ನಿರ್ಧರಿಸಿದ್ದರೆ ಅದರ ಅಂದಾಜು ವೆಚ್ಚ ತಯಾರಾಗಿದೆಯೇ ?

ಇ) ಹಾಗಿದ್ದಲ್ಲಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಯಾವ ಕಾರಣಕ್ಕಾಗಿ ವಿಳಂಬವಾಗಿದೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

ಇಲ್ಲ,

ಆ) ಮತ್ತು ಇ) ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಮಂತ್ರಿಗಳ ಹಾರಿಕೆಯ ಉತ್ತರವನ್ನು ಕೇಳಿದ ಮೇಲೆ ಬಹಳ ವಿಸ್ಮಯವಾಗುತ್ತದೆ. ಕಳೆದ ವರ್ಷ ಪಿ. ಹೆಚ್. ಇ. ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಬೇಕು ಹಾಗೂ ಬೀಳಗಿ ಮುಂತಾದ ನಾಲ್ಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದರು. ಇದು ಪ್ರದೇಶ ಸಮಾಚಾರದಲ್ಲಿ ಮತ್ತು ಪತ್ರಿಕೆಯಲ್ಲಿ ಕೂಡ ಬಂದಿದೆ. ಇಲ್ಲಿ ಇವರು ಅಧಿಕಾರಿಗಳುಕೊಟ್ಟಂತಹ ಉತ್ತರವನ್ನು ಕೊಡುತ್ತಿದ್ದಾರೆ. ಬೀಳಗಿ ತಾಲ್ಲೂಕಿನಲ್ಲಿರುವ ನಾಲ್ಕು ಎಕರೆ ನಿವೇಶನವನ್ನು ಕೂಡ ಅಸಿಸ್ಟೆಂಟ್ ಕಮೀಷನರ್‌ರವರು ನೋಡಿಕೊಂಡು ಹೋಗಿದ್ದಾರೆ, ಈಗ ಈ ನಿರ್ಮಾಣ ಕಾರ್ಯ ಉದ್ಭವಿಸುವುದಿಲ್ಲವೆಂದು ಹೇಳಿದರೆ ಹೇಗೆ ? ಅಧಿಕಾರಿಗಳು ಹೇಳಿದ ಮಾಹಿತಿ ಮೇರೆಗೆ ಉತ್ತರ ಕೊಟ್ಟಿದ್ದೀರಿ, ಈ ಬಗ್ಗೆ ತಾವು ಸರಿಯಾದ ಉತ್ತರವನ್ನು ತರಿಸಿ ಕೊಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧಿಕಾರಿಗಳು ಕೊಟ್ಟಂತಹ ಮಾಹಿತಿ ಪ್ರಕಾರ ಉತ್ತರವನ್ನು ಇಲ್ಲಿ ನೀಡಿದ್ದೇನೆ ಅವರು ಕೊಟ್ಟಂತಹ ಉತ್ತರ ಸರಿಯಿಲ್ಲವೆಂದು ತೋರಿಸಿ ಕೊಟ್ಟರೆ ಅವರ ಅಭಿಪ್ರಾಯಕ್ಕನುಗುಣವಾಗಿ ನಾವು ಏನು ಬೇಕೋ ಅದನ್ನು ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ೧೯೮೮ನೇ ಇಸವಿಯಲ್ಲಿ ಭಾರತೀಯ ಜನಸಂಖ್ಯಾ ಯೋಜನೆಯ ಕೈಕೆಳಗೆ ೨೬೪೯ ಕಟ್ಟಡಗಳನ್ನು ಕಟ್ಟಬೇಕೆಂದು ತೀರ್ಮಾನ ತೆಗೆದುಕೊಂಡು ೩೫ ಕೋಟಿ ೬೦ ಲಕ್ಷ ರೂಪಾಯಿಗಳು ಮಂಜೂರಾಗಿ ನಾನಾ ಹಂತಗಳಲ್ಲಿ ಕೆಲಸಗಳು ನಡೆಯುತ್ತಿವೆ ಮತ್ತು ಕೆಲವು ಕೆಲಸಗಳು ಮುಗಿದಿದೆ. ಇದು ಅದರ ಕೆಳಗೆ ಬರಬೇಕಾಗಿತ್ತು ಅದರೆ ಆ ಯೋಜನೆ ಕೆಳಗೆ ಇದನ್ನು ಮಂಜೂರು ಮಾಡಿಕೊಂಡಿಲ್ಲ, ಇದಕ್ಕೆ ಹೊಸ ಪ್ರಯತ್ನ ನಡೆಯಬೇಕೇ ಹೊರತು ಈ ಯೋಜನೆ ಅಡಿಯಲ್ಲಿ ಯಾವ ವಿಧವಾದಂತಹ ಅನುಕೂಲವೂ ಸಿಗುವುದಿಲ್ಲ ಕಾರಣವೇನೆಂದರೆ ಆ ಯೋಜನೆ ಮಂಜೂರಾದ ಮೇಲೆ ಅನಂತರ ವ್ಯತ್ಯಾಗಳನ್ನು ಮಾಡುವುದಕ್ಕೆ ಬರುವುದಿಲ್ಲ.

ಸಾಲ್ವಾರ ಗ್ರಾಮದಲ್ಲಿ ಆರಕ್ಷಕ ಠಾಣೆ

೧೫೨ (೨೩೫) (ಬಿ) ಶ್ರೀ ಕೆ. ಬಿ. ಶಾಣಪ್ಪ(ಷಹಬಾದ್).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಸಾಲ್ವಾರ ಗ್ರಾಮದಲ್ಲಿ ಆರಕ್ಷಕ ಠಾಣೆಯು ಮಂಜೂರಾಗಿದ್ದರೂ ಕಾರ್ಯಗತವಾಗದೆ ಇರಲು ಕಾರಣಗಳೇನು ?

ಆ) ಕಳೆದ ಅಧಿವೇಶನದಲ್ಲಿ ಈ ವರ್ಷದಲ್ಲಿಯೇ ಕಾರ್ಯರೂಪಕ್ಕೆ ತರಲಾಗುವುದೆಂದು ಮಾನ್ಯ ಸಚಿವರು ಲಿಖಿತ ಮೂಲಕ ಭರವಸೆ ನೀಡಿರುವುದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ, ಸದರಿ ಆರಕ್ಷಕ ಠಾಣೆಯು ಕಾರ್ಯವನ್ನು ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳುವರೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಇನ್ನೂ ಮಂಜೂರಾಗಿಲ್ಲ.

ಆ) ಕಳೆದ ಅಧಿವೇಶನದಲ್ಲಿ ಪರಿಶೀಲಿಸಲಾಗುವುದೆಂದು ಮಾತ್ರ ತಿಳಿಸಲಾಗಿತ್ತು.

ಇ) ಆರ್ಥಿಕ ಅನುಕೂಲತೆಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಅಭಿವೃದ್ಧಿ ಯೋಜನೆಯ ಪ್ರಕಾರ ಪೋಲೀಸ್ ಸ್ಟೇಷನ್ ಕೊಡಬೇಕೆಂದು ಮಹಾ ನಿರ್ದೇಶಕರು ವರದಿಯನ್ನು ತಯಾರು ಮಾಡಿದ್ದಾರೆ ಆದರೆ ಯೋಜನೆಗೆ ಸರಕಾರ ಹಣಕಾಸಿನ ತೊಂದರೆಯಿಂದ ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪೋಲೀಸ್ ಸ್ಟೇಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.